# ಕರ್ನಾಟಕ ವಿಧಾನ ಸಭೆ

ಬುಧವಾರ 6ನೇ ಸೆಪ್ಟಂಬರ್ 1995 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ಎಸ್.ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

**ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.**

ವಿಷಯ:- ಪ್ರಾಥಮಿಕ ಶಾಲಾ ಅನುದಾನ ಸಂಹಿತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 226 (2152)

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರಾಥಮಿಕ ಶಾಲಾ ಅನುದಾನ ಸಂಹಿತೆಯಲ್ಲಿ ಇರುವಂತೆ ಶಾಲಾ ಆಡಳಿತವನ್ನು ಪೋಷಕ ಬೋಧಕ ಸಂಸ್ಥೆ ವತಿಯಿಂದ ನಡೆಸಲು ಸಂಸ್ಕೃತ ಶಿಕ್ಷಣಕ್ಕೂ ಅನ್ವಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಾಥಮಿಕ ಶಾಲಾ ಅನುದಾನ ಸಂಹಿತೆಯನ್ನು ಸಂಸ್ಕೃತ ಪಾಠಶಾಲೆಗಳಿಗೆ ಅನ್ವಯಿಸುವಂತೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಇ) ಇದ್ದಲ್ಲಿ ಎಷ್ಟು ದಿನದ ಒಳಗಾಗಿ ಮಾಡಲಾಗುವುದು.

ಶ್ರೀ ಹೆಚ್.ಜಿ.ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಸಂಸ್ಕೃತ ಅನುದಾನ ಸಂಹಿತೆಯಲ್ಲಿ ಪೋಷಕ: ಬೋಧಕ ಸಂಸ್ಥೆ ವತಿಯಿಂದ ಶಾಲೆ ನಡೆಸಲು ಅವಕಾಶವಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ.ಬಿ.ಶಿವಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನಾನು ಪ್ರಾಥಮಿಕ ಶಾಲಾ ಅನುದಾನ ಸಂಹಿತೆಯಲ್ಲಿ ಇರುವಂತೆ ಶಾಲಾ ಆಡಳಿತವನ್ನು ಪೋಷಕ ಮತ್ತು ಬೋಧಕ ಸಂಸ್ಥೆ ವತಿಯಿಂದ ನಡೆಸಲು ಸಂಸ್ಕೃತ ಶಿಕ್ಷಣಕ್ಕೂ ಅನ್ವಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಇಲ್ಲ ಎಂದು ಹೇಳಿದ್ದಾರೆ. ಎಲ್ಲಾ ರಾಜ್ಯದ ಪ್ರಾಥಮಿಕ ಶಾಲಾ ಅನುದಾನ ಸಂಹಿತೆಯಲ್ಲಿ ಈ ಅವಕಾಶ ಬೇರೆ ಈ ಎಲ್ಲಾ ಭಾಷೆಗಳಿಗೂ ಇರತಕ್ಕಂತಹ ಈ ಸಂದರ್ಭದಲ್ಲಿ ಸಂಸ್ಕೃತವನ್ನು ಹೊರತು ಪಡಿಸಿರತಕ್ಕಂಥದ್ದು ಸರಿಯಲ್ಲ. ಅದನ್ನು ಸೇರಿಸುವುದಕ್ಕೆ ಸಾಧ್ಯ ಇದೆಯೇ? ಸೇರಿಸುವುದರಿಂದ ಏನು ತೊಂದರೆ ಇದೆ, ಇಲ್ಲಿಯವರೆಗೆ ಸೇರಿಸದೆ ಇರಲಿಕ್ಕೆ ಆಗಿರತಕ್ಕಂತಹ ನಷ್ಟ ಏನು ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಈ ಸಂಸ್ಕೃತ ಅನುದಾನ ಸಂಹಿತೆಯ ಬೋಧಕ ಸಂಸ್ಥೆ ವತಿಯಿಂದ ಶಾಲೆ ನಡೆಸುವ ಅವಕಾಶ ಇಲ್ಲ ಎಂದು ಹೇಳಿ ಕಳುಹಿಸಿಕೊಟ್ಟಿದ್ದೇವೆ. ಕಾನೂನಿನಲ್ಲಿ ಈ ಸಂಸ್ಕೃತಕ್ಕೆ ಸಂಬಂಧಪಟ್ಟ ಹಾಗೆ ಇರತಕ್ಕಂಥದ್ದರಲ್ಲಿ ಅವಕಾಶ ಕಲ್ಪಿಸಿಕೊಟ್ಟಿಲ್ಲ. ಈ ಹೊಸ ಶಿಕ್ಷಣ ಮಸೂದೆ ಜಾರಿಗೆ ಬಂದಿದ್ದರಿಂದ ಆ ರೀತಿ ಏನಾದರೂ ಅನಾನುಕೂಲಗಳು ನಡೆದಿದ್ದಲ್ಲಿ ಅದನ್ನು ಸರಿಪಡಿಸಲು ಹೊಸ ಶಿಕ್ಷಣ ಮಸೂದೆಯಲ್ಲಿ ಅವಕಾಶ ಇದೆ. ಅಂತಹ ಸಂದರ್ಭದಲ್ಲಿ ಆ ರೀತಿ ಏನಾದರೂ ಅನಾನುಕೂಲಗಳು ಆಗಿವೆ ಎಂದು ಕಂಡು ಬಂದರೆ ಅದನ್ನು ಈಗಾಗಲೇ ಸರಿಪಡಿಸತಕ್ಕಂತಹ ವ್ಯವಸ್ಥೆ ಹೊಸ ಮಸೂದೆಯಲ್ಲಿ ಅವಕಾಶ ಇದೆ. ಸಧ್ಯದಲ್ಲಿ ಆ ರೀತಿಯ ಯಾವ ಎಡರುತೊಡರುಗಳು ಬಾರದೆ ಇದ್ದುದರಿಂದ ನಮ್ಮ ಸರ್ಕಾರದ ಅವಗಾಹನೆಗೆ ಬಂದಿಲ್ಲ. ಒಂದು ವೇಳೆ ಬಂದರೆ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಈಗ ತಾವು ಹೇಳುತ್ತಿದ್ದೀರಿ, ಸಂಸ್ಕೃತ ವಿದ್ಯಾಪೀಠಗಳಿಗೆ ಗ್ರ್ಯಾಂಟ್ ಇನ್ ಏಡ್ ಮಾಡಿಕೊಡುತ್ತೇವೆ ಎನ್ನತಕ್ಕಂತಹ ಒಂದು ಭರವಸೆಯನ್ನು ಕೊಡುತ್ತಿದ್ದೀರಿ ಸಂತೋಷ. ಎಲ್ಲಾ ಭಾಷೆಗಳಿಗೆ ಎಲ್ಲೆಲ್ಲಿ ಸಹಾಯ ಮಾಡಬೇಕು ಮಾಡಿ ಹಣ ಇದ್ದರೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈಗ ಇರತಕ್ಕಂತಹ ಗ್ರ್ಯಾಂಟ್ ಇನ್ ಏಡ್ ಕೋಡ್ ಪ್ರಕಾರ ತಾವು ಕನ್ನಡ ಸ್ಕೂಲ್‌ಗಳಿಗೆ ಕೊಡತಕ್ಕಂತಹದ್ದಕ್ಕೆ ನಿಮ್ಮ ಕೈಯಲ್ಲಿ ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇಲ್ಲ ಎಂದು ಹೇಳಿ ಎಕಾನಮಿ ಆರ್ಡರ್ ಎಂದು ಹೇಳಿ, ನಾನ್ ಟೀಚಿಂಗ್ ಸ್ಟಾಫ್‌ಗೆ ಅಪ್ರೂವಲ್ ಕೊಡುವುದಿಲ್ಲ. ಟೀಚಿಂಗ್ ಸ್ಟಾಫ್‌ಗೆ ಅಪ್ರೂವಲ್ ಕೊಡುವುದಿಲ್ಲ, ಪ್ಯೂನ್ಸ್‌ಗೆ ಕೊಡುವುದಿಲ್ಲ. ಈ ಪರಿಸ್ಥಿತಿ ಇರುವಾಗ ನೀವು ಇನ್ನೊಂದು ಕಡೆ ಹೇಳುತ್ತೀರಿ, ಇದು ಪ್ರಾವಿಷನ್ ನಾವು ಮಾಡಿಕೊಡುತ್ತೇವೆ, ಈಗ ತರತಕ್ಕಂತಹ ಮಸೂದೆಯಲ್ಲಿ ಇದೆಲ್ಲವನ್ನೂ ಕೂಡ ಅಳವಡಿಸಿಕೊಂಡಿದ್ದೇವೆ ಎಂದು ಹೇಳುತ್ತೀರಿ. ಅದಕ್ಕೆ ದಯವಿಟ್ಟು ಒಂದು ಪಾಲಿಸಿ ಕ್ಲಿಯರ್ ಇರಬೇಕು ಅಂದರೆ ಎಲ್ಲಿ ಗ್ರ್ಯಾಂಟ್ ಇನ್ ಏಡ್ ಕೋಡ್ ಪ್ರಕಾರ ನೀವು ಸ್ಕೂಲ್‌ಗಳನ್ನು ಅಪ್ರೂವ್ ಮಾಡುತ್ತೀರಿ, ಅಂತಹ ಕಡೆಯಾದರೂ ಶಿಕ್ಷಕರನ್ನು ತುಂಬತಕ್ಕಂತಹ ವ್ಯವಸ್ಥೆ ಮಾಡುತ್ತೀರೋ ಹೇಗೆ, ಮತ್ತು ಈ ನಾನ್ ಟೀಚಿಂಗ್ ಪೋಸ್ಟ್‌ಗಳನ್ನು ಕೂಡ ಫಿಲ್ ಅಪ್ ಮಾಡುವುದಕ್ಕೆ ಅವಕಾಶ ಮಾಡುತ್ತೀರೋ ಹೇಗೆ? ಹೊಸ ಸ್ಕೂಲ್‌ಗಳನ್ನು ಕೊಡುವುದಕ್ಕಿಂತಲೂ ಇರತಕ್ಕಂತಹ ಸ್ಕೂಲ್‌ಗಳಿಗೆ ಶಿಕ್ಷಕರನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೀರೋ ಹೇಗೆ?

ಶ್ರೀ ಹೆಚ್.ಜಿ.ಗೋವಿಂದೇಗೌಡ:- ತಾವು ಕೇಳಿರತಕ್ಕಂತಹ ಪ್ರಶ್ನೆ ನಾನು ಸಂಸ್ಕೃತದ ಬಗ್ಗೆ ಕೊಡುತ್ತೇನೆ ಎಂದು ಹೇಳತಕ್ಕಂತಹ ಮಾತನ್ನು ಹೇಳಿರತಕ್ಕಂಥದ್ದಲ್ಲ. ಒಂದು ವೇಳೆ ಆ ರೀತಿ ಎಲ್ಲಾದರೂ ಅನಾನುಕೂಲಗಳಾದರೆ ಅದನ್ನು ಪರಿಶೀಲನೆ ಮಾಡುವುದಕ್ಕೆ ಹೊಸ ಶಿಕ್ಷಣ ಮಸೂದೆಯಲ್ಲಿ ಅವಕಾಶ ಇರುವುದರಿಂದ ಅದಕ್ಕೆ ಅವಕಾಶವುಂಟು ಎಂದು ಹೇಳಿದೆ, ಅಷ್ಟೆ ಹೊರತು ಕೊಡುತ್ತೇವೆ ಎಂಬ ಮಾತನ್ನು ಹೇಳತಕ್ಕಂಥದ್ದು ಅಲ್ಲ. ಎರಡನೆಯದು ತಾವು ಏನು ಪ್ರಶ್ನೆ ಕೇಳುತ್ತಿದ್ದೀರಿ, ನಾನ್ ಟೀಚಿಂಗ್ ಅನೇಕ ಶಾಲೆಗಳಲ್ಲಿ ಅವಶ್ಯಕತೆ ಇದೆ. ಅದನ್ನು ಒದಗಿಸತಕ್ಕಂತಹ ಮತ್ತು ಉಪಾಧ್ಯಾಯರುಗಳನ್ನು ಒದಗಿಸತಕ್ಕಂಥದ್ದರ ಬಗ್ಗೆ ಮಾನ್ಯ ಸ್ನೇಹಿತರು ಏನು ಕೇಳುತ್ತೀರಿ, ಇದು ನ್ಯಾಯವಾಗಿ ಆಗಬೇಕಾಗಿದೆ. ತುಂಬಾ ಉಪಾಧ್ಯಾಯರುಗಳ ಕೊರತೆಯೂ ಇದೆ. ನಾನ್ ಟೀಚಿಂಗ್ ಸ್ಟಾಫ್ ಅವಶ್ಯಕತೆಯೂ ಇದೆ. ಇದನ್ನೆಲ್ಲಾ ನಾವು

ಸರ್ಕಾರದಲ್ಲಿ ಪರಿಶೀಲನೆ ಮಾಡಿ ಆಗಬೇಕು ಎಂದು ಯೋಚನೆ ಮಾಡಿದ್ದೇವೆ. ನಮಗೆ ಗೊತ್ತಿರುವ ಹಾಗೆ ಈ ರಾಜ್ಯದಲ್ಲಿ ಜನಸಂಖ್ಯೆ ಆಸ್ಫೋಟನೆ ಒಂದು ಸೆಕೆಂಡಿಗೆ ಎಷ್ಟು ಮಕ್ಕಳು ಹುಟ್ಟುತ್ತವೆ ಎನ್ನುವುದನ್ನು ನೋಡಿದಾಗ ಇದನ್ನು ಬಗೆಹರಿಸುವುದಕ್ಕೆ ಆಗುತ್ತದಯೋ, ಇಲ್ಲವೋ ಎನ್ನುವ ಶಂಕೆ ನಮಗೂ ನಿಮಗೂ ಇದೆ. ಪ್ರತಿಯೊಬ್ಬರೂ ಇದರ ಬಗ್ಗೆ ಚಿಂತೆ ಮಾಡತಕ್ಕಂಥಾದ್ದು ಇದೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಇದನ್ನು ಬಗೆಹರಿಸುವುದಕ್ಕೆ ಸಾಧ್ಯವೇ ಇಲ್ಲವೇನೋ ಎನ್ನುವಂತಹ ಸಮಸ್ಯೆ ಮನಸ್ಸಿನಲ್ಲಿ ಬರುತ್ತದೆ. ಎಲ್ಲಿ ಹೋದರೂ ಶಾಲೆಗಳು ಇಲ್ಲ, ಎಲ್ಲಿ ಹೋದರೂ ಉಪಾಧ್ಯಾಯರುಗಳು ಇಲ್ಲ. ಎಲ್ಲಿ ಹೋದರೂ ಪರಿಸರ ಸರಿಯಿಲ್ಲ. ಒಂದು ಇದ್ದರೆ ಒಂದು ಇಲ್ಲ, ಈ ರೀತಿ ಗೊಂದಲದ ವಾತಾವರಣ ಇಡೀ ದೇಶ ಹಾಗೂ ರಾಜ್ಯದ ಮೂಲೆ ಮೂಲೆಯಲ್ಲಿ ನೋಡುತ್ತಿದ್ದೇವೆ. ಇದನ್ನು ನಾವು ಸಾಧ್ಯವಾದಮಟ್ಟಿಗೆ ಬಗೆಹರಿಸಲೇ ಬೇಕಾಗುತ್ತದೆ. ಇದನ್ನು ಹಂತ ಹಂತವಾಗಿ ಮಾಡಬೇಕಾಗುತ್ತದೆ. ಹಂತಹಂತವಾಗಿ ಎಂದರೆ, ಈ ವರ್ಷ 25 ಸಾವಿರ ಉಪಾಧ್ಯಾಯರು ಬೇಕು ಎಂದರೆ ಬರುವ ವರ್ಷ 40 ಸಾವಿರ ಉಪಾಧ್ಯಾಯರ ಸಂಖ್ಯೆ ಬೇಕಾಗುತ್ತದೆ ಎನ್ನುವ ರೀತಿ ಜನಸಂಖ್ಯೆ ಸ್ಫೋಟವಾಗುತ್ತಿದೆ. ಮತ್ತು ಅಲ್ಲಿ ಅವಶ್ಯಕತೆಯೂ ಇದೆ. ಉಪಾಧ್ಯಾಯರುಗಳ ನೇಮಕಾತಿ ಬಗ್ಗೆ ಕೂಡಲೇ ಕ್ರಮ ಕೈಗೊಂಡಿದ್ದೇವೆ. ನಾನ್ ಟೀಚಿಂಗ್ ಸ್ಟಾಫ್ ಅನ್ನು ಈ ವರ್ಷದ ಮಟ್ಟಿಗೆ ಮಾಡುತ್ತಿಲ್ಲ. ಟೀಚಿಂಗ್ ಸ್ಟಾಫ್ ಅನ್ನು ಸಾಧ್ಯವಾದಷ್ಟು ಮಟ್ಟಿಗೆ ನೇಮಕ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಅಲ್ಲಿಯ ಪ್ರಭಾವ ಮತ್ತೇ ಇಲ್ಲಿ ಇನ್ನು ಪುನರಾವರ್ತನೆಯಾಗುತ್ತಿದೆ. ಈಗ ಮುಂದೆ ಏನಾದರೂ ಯೋಚನೆ ಮಾಡಬೇಕು, ಯಡಿಯೂರಪ್ಪನವರು.

ಶ್ರೀ ಬಿ.ಜಿ.ಶಿವಪ್ಪ:- ಇಲ್ಲಿಂದ ಅಲ್ಲಿಗೆ ಏನಾದರೂ ಹೋದರೆ ಬಹಳ ದಿವಸ ಮಾನ್ಯ ಸಭಾಧ್ಯಕ್ಷರು ಎಂದೇ ಹೇಳುವುದು.

ಅಧ್ಯಕ್ಷರು: ಹೋಗುವಾಗ ನಾವೆಲ್ಲರೂ ಒಟ್ಟಾಗಿ ಸೇರಿ ಅಲ್ಲಿ ಹೋಗೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಏಕೆ ನಿಮಗೆ ನಮ್ಮನ್ನು ಅನಾಥರನ್ನಾಗಿ ಮಾಡಿ ಹೋಗಬೇಕು ಎಂದು ಇದ್ದೀರಿ. ಇಷ್ಟು ಬೇಗ ಬೇಸರ ಆದರೆ ಹೇಗೆ?

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಶಿವಪ್ಪನವರು ಮಂತ್ರಿಗಳಾಗಿ ಅಲ್ಲಿ ಹೋಗಬಹುದು ಅಷ್ಟೆ. ಮಂತ್ರಿಗಳಾಗಿ ಆ ಕಡೆ ಹೋಗುತ್ತಾರೆ.

ಅಧ್ಯಕ್ಷರು:- ಎಂದರೆ ಅವರು ಆ ಕಡೆ ಹೊರಟು ಹೋಗುತ್ತಾರೆಯೇ?

ಶ್ರೀ ಬಿ.ಜಿ.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಹೊಸ ಶಿಕ್ಷಣ ಮಸೂದೆಯಲ್ಲಿ ಇದಕ್ಕೆ ಅವಕಾಶ ಇದೆ ಎಂದು ನಾವು ಅಷ್ಟಣೆ ಕೊಡಿಸಿದ್ದೀರಿ. ಮಾನ್ಯ ಅಧ್ಯಕ್ಷರೆ, ಇರತಕ್ಕಂಥ ಕೆಲವೇ ಸಂಸ್ಕೃತ ಉಪಾಧ್ಯಾಯರುಗಳೂ ಕೂಡ ಕೆಲವು ಶಾಲೆಗಳಲ್ಲಿ ಈ ತರಗತಿ ತೆರೆದು ಅದನ್ನು ಇದ್ದಕ್ಕದ್ದ ಹಾಗೆ ಮುಚ್ಚುವುದರಿಂದ ಅವರು ಅನಾಥರಾಗುತ್ತಿದ್ದಾರೆ. ಇದು ಗಮನಕ್ಕೆ ಬಂದಲ್ಲಿ ಸರಿಪಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ದಿ:25.5.92 ರಲ್ಲಿ ಆಗಿರತಕ್ಕಂಥ ಈ ರೀತಿಯ ವ್ಯವಹಾರವನ್ನು ನಾನು ತಮ್ಮ ಮುಖಾಂತರ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಈ ತರಹದ ಹಲವಾರು ವಿಚಾರಗಳನ್ನು ತಮಗೆ ಕೊಡುವವನಿದ್ದೇನೆ. ನಾವು ಅದನ್ನು ಗಮನಕ್ಕೆ ತೆಗೆದುಕೊಂಡು ಅವರಿಗೆ ಆಗಿರತಕ್ಕಂಥ ತೊಂದರೆಗಳನ್ನು ಬಗೆಹರಿಸಬೇಕು

ಎಂದು ಕೇಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಇದರ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ರಾಜ್ಯಕ್ಕೆ ಅನ್ಯಾಯವಾಗಿರುವಂತಹ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಸಂಸ್ಕೃತ ಅಭಿವೃದ್ಧಿಗೋಸ್ಕರ ರಾಜ್ಯಕ್ಕೆ ಕೊಟ್ಟಂತಹ ಹಣವನ್ನು ಉಪಯೋಗ ಮಾಡದೆ, ಕಳೆದ ಸಲ ಕೂಡ ಹಣ ಅಲ್ಲೆ ಹೋಗಿದೆ. ಏಕೆ ಹಣವನ್ನು ಉಪಯೋಗಿಸುತ್ತಿಲ್ಲ. ದೇಶದಲ್ಲಿ ಕೇವಲ ನಾಲ್ಕು ರಾಜ್ಯಗಳು ಮಾತ್ರ ಹಣವನ್ನು ಉಪಯೋಗಿಸಿದೆ ಎನ್ನುವ ವಿಚಾರವನ್ನು ತಿಳಿದಿದ್ದೇವೆ. ಸುಮಾರು 10 ಕೋಟಿ ರೂಪಾಯಿ ಹಣ ವಾಪಸ್ಸು ಹೋಗಿದೆ. ನೀವು ಅದನ್ನು ಏಕೆ ಉಪಯೋಗ ಮಾಡುತ್ತಿಲ್ಲ ಎನ್ನುವ ಮಾತನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ 10 ಕೋಟಿ ರೂಪಾಯಿಯನ್ನು ಸಂಸ್ಕೃತ ಅಭಿವೃದ್ಧಿಗೋಸ್ಕರ ಕೊಟ್ಟಾಗ ಹಣವನ್ನು ಖರ್ಚು ಮಾಡದೇ ಲ್ಯಾಪ್ಸ್ ಆಗುತ್ತಿದೆ. ಸಂಸ್ಕೃತವನ್ನು ಬೆಳೆಸುವ ದೃಷ್ಟಿಯಿಂದ ಈ ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದರೆ ಸಾಕು, ಇನ್ನು ಏನೂ ಕೇಳುವುದಿಲ್ಲ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಆ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಇರುವುದರಿಂದ ನಾವು ಖರ್ಚು ಮಾಡುತ್ತೇವೆ ಎಂದು ಹೇಳುವುದು ಸರಿ ಬರುವುದಿಲ್ಲ.

ಅಧ್ಯಕ್ಷರು:- ರಾಮದಾಸ್‌ರವರೆ, ಹಣ ಒಂದು ವೇಳೆ ಇದ್ದರೆ ಮಾನ್ಯ ಗೋವಿಂದೇಗೌಡರ ಬಗ್ಗೆ ನನಗೆ ನಂಬಿಕೆ ಇದೆ. ದುರುಪಯೋಗ ಆಗುವ ಪ್ರಶ್ನೆ ಇಲ್ಲ, ಸದುಪಯೋಗವಾಗುತ್ತದೆ.

ಶ್ರೀ ರಾಮದಾಸ್:- ಕೇಂದ್ರ ಸರ್ಕಾರದ ದುಡ್ಡನ್ನು ಉಪಯೋಗಿಸಿಕೊಂಡಿಲ್ಲವೆಂದು ಹೇಳುತ್ತಿದ್ದೇವೆ. ಅದನ್ನು ಉಪಯೋಗಿಸಿಕೊಳ್ಳಿ.

ವಿಷಯ:- ಶಿವಮೊಗ್ಗ ಜಿಲ್ಲೆ ಆಯನೂರು ಆಸ್ಪತ್ರೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :227 (2188)

ಶ್ರೀ ಆಯನೂರು ಮಂಜುನಾಥ (ಹೊಸನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನ ಆಯನೂರಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 60 ಹಾಸಿಗೆಗಳ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿರುವ ಹಣ ಎಷ್ಟು ಹಾಗೂ ಯಾವಾಗ ಮಾಡಲಾಗಿದೆ.

ಇ) ತತ್ಸಂಬದ್ಧವಾದ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದೆಯೇ? ಅದು ಯಾವ ಹಂತದಲ್ಲಿದೆ.

ಈ)ಹಾಗಿಲ್ಲದಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು, ಯಾವಾಗ ಮುಕ್ತಾಯ ಗೊಳಿಸಲಾಗುವುದು